ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, 19th October 1970.

The House met in the Assembly Chamber, Vidhana Soudha, Bangalore, at Nine of the Clock.

MR. SPEAKER (SRI S. D. KOTHAVALE) in the Chair.

Obituary Reference *re*: Demise of Sri Syed Ghouse Mohiyuddin

MR. SPEAKER.—Before we proceed, unfortunately I have to make an obituary reference.

I regret to inform the House regarding the death of Sri Syed Ghouse Mohiyuddin on 15th October 1970. He was a member of the Representative Assembly during the years 1945-49. He was also a member of the Mysore Legislative Council during the years 1952-60. He was the President of the erstwhile Bangalore City Municipality and the then Mysore Journalists Association. Sri Ghouse Mohiyuddin was a Journalist and Editor of "Alkalam" an Urdu daily. He was a Social worker and taking lot of interest in the welfare of the people.

On behalf of the members of the House, I convey the condolence of the House to the members of the bereaved family.

I request all members to stand in silence for a minute as a mark of respect to the departed soul.

(*All the Members stood in silence for a minute*)

STARRED QUESTIONS

to whlch oral answers were given)

Schemes approved by the Rural Electrification Corporation

175. **Sri I. SOMASEKHARAPPA** (Hosanagar).—

Will the Chief Minister be pleased to state :—

(*a*) the number of schemes submitted by the M.S-E.B. for the approval of "The Rural Electrification Corporation", during 1968-69, 1969-70 ;

(SRI I. SOMASEKHARAPPA)

(*b*) the number of schemes approved by "The Rural Electrification Corporation" during the current year ;

(*c*) the total estimated cost of the approved schemes ;

(*d*) the number of (i) Villages likely to be electrified ; (ii) pumpsets to be energised and (iii) Industrial electricity connections to be given as a result of these schemes ?

Sri VEERENDRA PATIL (Chief Minister).—

(*a*) Nil.
(*b*) Two.
(*c*) Rs. 72 lakhs.
(*d*) (i) 242 villages.
(ii) 7,396 pumpsets.
(iii) 258 L.T. industrial Units.

ಶ್ರೀ ಐ. ಸೋಮಶೇಖರಪ್ಪ.—(ಅ) ಗೆ ಉತ್ತರವಾಗಿ 'ನಿಲ್' ಎಂದು ಹೇಳಿದ್ದಾರೆ. 1968-69 ಮತ್ತು 1970 ನೇ ಸಾಲಿನಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಯಾವ ಸ್ಕೀಮುಗಳು ಇರಲಿಲ್ಲವೇ ? ಆ ರೀತಿ ಸ್ಕೀಮುಗಳು ಇದ್ದರೂ ತಮಗೆ ಹಣದ ಕೊರತೆ ಇರಲಿಲ್ಲವೇ ? ಎರಡನೇ ಪ್ರಶ್ನೆ ಕೋಆಪರೇಟೀವ್ ಸೊಸೈಟಿಗಳಿಗೆ ಹಣ ಕೊಟ್ಟಿದ್ದೇವೆಂದು ಹೇಳುತ್ತೀರಿ. ಯಾವ್ಯಾವ ಕೋಆಪರೇಟಿವ್ ಸೊಸೈಟಿಗಳಿಗೆ ಹಣವನ್ನು ಕೊಟ್ಟಿದ್ದೀರಿ ?

†ಶ್ರೀ ವೀರೇಂದ್ರ ಪಾಟೀಲ್.—ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ ತಾ: 27-5-1969 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅದಕ್ಕಿಂತ ಮೊದಲು ಈ ತರಹ ಪ್ರೋಗ್ರಾಂ ಕಳುಹಿಸುವ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಅದನ್ನು ಕಾರ್ಪೊರೇಷನ್ನಿನವರು ಮಾಡಿದ್ದಾರೆ. 7 ಸ್ಕೀಮುಗಳನ್ನು ಕಳುಹಿಸಿದ್ದೇವೆ. 7 ಸ್ಕೀಮುಗಳ ಪೈಕಿ ಎರಡು ಸ್ಕೀಮುಗಳು ಮಂಜೂರಾಗಿವೆ. ಕಾರ್ಪೊರೇಷನ್ನಿನಿಂದ ಮ್ಯಾಗ್ನಿಮಂ ಬೆನಿಫಿಟ್ ಪಡೆಯಬೇಕೆಂಬ ವಿಚಾರದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಈ ಸ್ಕೀಮುಗಳನ್ನು ಮಾಡಿರುವ ನಂದರ್ಬದಲ್ಲಿ ಫೀಸ್ಡ್ ಪ್ರೋಗ್ರಾಂ ಏನಾದರೂ ಇಟ್ಟುಕೊಂಡಿದ್ದೀರಾ ? ಎಲ್ಲಾ ಡಿವಿಜನ್‌ಗಳಲ್ಲಿಯೂ ಈಕ್ವಿಟ್‌ಬರ್ ಡಿಸ್ಟ್ರಿಬ್ಯೂಷನ್ ಪಂಪ್‌ಸೆಟ್ಸ್ ಮಾಡುವ ಸಲುವಾಗಿ ನಿಮ್ಮ ಎಲೆಕ್ಟ್ರಿಕಲ್ ಡಿವಿಜನ್‌ಗಳಿಂದ ಪ್ರೋಗ್ರಾಂ ತರಿಸಿದ್ದೀರಾ ? ಆ ರೀತಿ ತರಿಸಿದ್ದರೆ ಅವನ್ನು ಯಾವಾಗ ತರಿಸಿದ್ದೀರಿ ? ಅದನ್ನು ಸ್ವಲ್ಪ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ನನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದಕ್ಕೆ ಸುಮಾರು 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಕಾರ್ಪೊರೇಷನ್ನಿನಿಂದ ನಾವು ಮ್ಯಾಗ್ನಿಮಂ ಬೆನಿಫಿಟ್ ಪಡೆಯಬೇಕೆಂದು ಕೆಲವು ಸ್ಕೀಮುಗಳನ್ನು ಮಾಡುತ್ತಿದ್ದೇವೆ. ಆ ಸ್ಕೀಮುಗಳನ್ನು ಎಲ್ಲಾ ಕಡೆಯೂ ಮಾಡಬೇಕೆಂದಿದ್ದೇವೆ. ಕಾರ್ಪೊರೇಷನ್ನಿನವರು ದುಡ್ಡು ಕೊಟ್ಟರೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡುತ್ತೇವೆಂದು ಹೇಳಲಿಲ್ಲ. ನಾರ್ಮಲ್ ಪ್ರೋಗ್ರಾಂನಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ನಡೆಸುತ್ತಿದ್ದೇವೆ. ಯಾವಾಗ ಪ್ರಾಜೆಕ್ಟ್ ರಿಪೋರ್ಟನ್ನು ತಯಾರುಮಾಡುತ್ತಾರೋ ಆಗ ಅದರ ಫೀಜಿಬಲಿಟಿಯನ್ನು ನೋಡುತ್ತಾರೆ. ನಮಗೆ ರಿಟರ್ನ್ ಎಷ್ಟು ಬರುತ್ತದೆಂದು ನೋಡಿಕೊಂಡು ಪ್ರಾಜೆಕ್ಟ್ ರಿಪೋರ್ಟ್ ಕಳುಹಿಸಿದ ತಕ್ಷಣ ಮಂಜೂರು ಮಾಡುತ್ತಾರೆ. ಆದರೆ ಕಾರ್ಪೊರೇಷನ್ನಲ್ಲಿ ಇರುವ ದುಡ್ಡು ನೋಡಿದರೆ ಕಾರ್ಪೊರೇಷನ್ನಿನ ಎಲ್ಲಾ ಪ್ರಾಬ್ಲಂಗಳು ಸಾರ್ವ್ ಆಗುತ್ತದೆಂದು ಯಾವುದೂ ಹೇಳುವುದಕ್ಕಾಗುವುದಿಲ್ಲ. ಕಾರ್ಪೊರೇಷನ್ನಿನಿಂದ ಲಾಭ ಪಡೆಯುವ ಉದ್ದೇಶ ಇರುವುದರಿಂದ ನಾವು ಲಾಭ ಪಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಈಗ ನಾರ್ಮಲ್ ಪ್ರೋಗ್ರಾಂ ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಏನೇನು ನಡೆಯುತ್ತಿದೆಯೋ ಅದು ಮುಂದುವರಿಯುತ್ತದೆ.

---

† Indicates that the remarks or speeches have not been revised by the member concerned.

Sri N. B. SIRDESAI.—May I know whether Government is going to issue directions to the Mysore State Electricity Board for undertaking the electrification of villages which are not included in the earlier programme? What are the conditions the villagers have to fulfil?

Sri VEERENDRA PATIL.—Consultation will be made with the District Development Council and also with the Members of the Legislature. That procedure is already there. If the loans are required, they are ready to sanction. They say the maximum number of villages are going to be electrified though all of them are not included in the earlier schemes.

ಶ್ರೀ ಜಿ. ದುಗ್ಗಪ್ಪ.—ಕಾರ್ಪೊರೇಷನ್ನಿನಿಂದ ಮಂಜೂರಾದ ಸ್ಕೀಮುಗಳ ವಿವರಗಳೇನು?

ಶ್ರೀ ವೀರೇಂದ್ರ ಪಾಟೀಲ್.—7 ಸ್ಕೀಮುಗಳನ್ನು ನಾವು ಕಳುಹಿಸಿದ್ದೇವೆ. ಅವುಗಳಲ್ಲಿ ಎರಡು ಸ್ಕೀಮುಗಳನ್ನು ಅಪ್ರೂವ್ ಮಾಡಿದ್ದಾರೆ. ಅವರು ಲೋನ್ ಕೊಡುವಾಗ ಕೆಲವು ಕಂಡೀಷನ್‌ಗಳನ್ನು ಹಾಕಿದ್ದಾರೆ. ಅವುಗಳ ವಿವರ ಈ ರೀತಿ ಇದೆ:

The loans by the Corporation are subject to the following conditions:

(a) the period of loan will be 20 years for advanced and 30 years for backward areas.

(b) the period of moratorium will be 5 years.

(c) the repayment will commence from sixth year.

(d) the loan will bear interest of 6¼ per cent for advanced areas for the complete period; 5¼ per cent for backward areas for the first 10 years and 5¾ per cent for next 5 years thereafter and 6 per cent for the remaining period.

(e) Rebate for prompt payment of interest will be ¼ per cent.

The repayment of loans and payment of interest thereon have to be guaranteed by Government.

ಶ್ರೀ ಎಚ್. ಸಿದ್ದವೀರಪ್ಪ.—ಈ ರೂರರ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನಿನಲ್ಲಿ ಯಾರ್ಯಾರು ಇದ್ದಾರೆ ಮತ್ತು ಈ ರೂರರ್ ಎಲೆಕ್ಟ್ರಿಫಿಕೇಷನ್ ಸ್ಕೀಂ ಪ್ರಕಾರ ಮೈಸೂರು ರಾಜ್ಯದಲ್ಲಿ ಎಷ್ಟು ವರ್ಷದಲ್ಲಿ ಎಲೆಕ್ಟ್ರಿಫಿಕೇಷನ್ ಪೂರೈಸುವುದಕ್ಕೆ ಸಾಧ್ಯ?

ಶ್ರೀ ವೀರೇಂದ್ರ ಪಾಟೀಲ್.— ನಾನು ಹೇಳಿದೆ, ಈ ರೂರರ್ ಎಲೆಕ್ಟ್ರಿಫಿಕೇಷನಿಗೂ ನಮ್ಮ ನಾರ್ಮರ್ ಪ್ರೋಗ್ರಾಮಿಗೂ ಏನೂ ಸಂಬಂಧವಿಲ್ಲ. ಅದಕ್ಕೆ 150 ಕೋಟಿ ರೂಪಾಯಿ ಬೇಡಿ ವಾಳ ಹಾಕಿದ್ದಾರೆ. ಅಲ್ಲಿಗೆ ನಮ್ಮ ಸ್ಕೀಮುಗಳನ್ನು ಕಳುಹಿಸಿ ಅವರಿಗೆ ಒತ್ತಾಯಮಾಡಿ, ಸ್ಯಾಂಕ್ಷನ್ ಮಾಡಿಸಿಕೊಂಡು ಅವರಿಂದ ಎಷ್ಟು ದುಡ್ಡು ಸಿಗುತ್ತದೋ ಅದನ್ನು ಉಪಯೋಗಮಾಡಿಕೊಳ್ಳುತ್ತಿದ್ದೇವೆ. ಈ ಕಾರ್ಪೊರೇಷನ್ನನ್ನು ಕೇಂದ್ರಸರ್ಕಾರದವರು ಮಾಡಿದ್ದಾರೆ. ಇದರಲ್ಲಿ ಯಾರ್ಯಾರು ಇದ್ದಾರೆಂಬುದಕ್ಕೆ ವರದಿ ನನ್ನ ಮುಂದೆ ಇಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ರೂರರ್ ಎಲೆಕ್ಟ್ರಿಫಿಕೇಷನ್ನಿನವರು ನಮ್ಮಲ್ಲಿ ಕೆಲವು ಗ್ರಾಮಗಳಿಗೆ ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ. ಈ ಗ್ರಾಮಗಳನ್ನು ಸೆಲೆಕ್ಟ್ ಮಾಡುವಂತಹ ಸಂದರ್ಭದಲ್ಲಿ ಕೇವಲ ಗ್ರಾಮಗಳನ್ನು ಘಟಕವಾಗಿಟ್ಟುಕೊಂಡು ಹಿಂದುಳಿದ ಜಿಲ್ಲೆಗಳಲ್ಲಿ ಸಮಗ್ರವಾಗಿ ಎಲೆಕ್ಟ್ರಿಫಿಕೇಷನ್ ಮಾಡುವಂತ ಉದ್ದೇಶದಿಂದ ಮಾಡುತ್ತಾರೋ? ಮತ್ತು ಎರಡನೆಯದು:— ಇವರು ವರ್ಷಕ್ಕೆ ಎಷ್ಟು ಹಣವನ್ನು ಕೊಡುತ್ತಾರೆ? ಮತ್ತು ಅವರು ಕೊಡುವ ಹಣವನ್ನು ನೋಡಿಕೊಂಡು ಅಂಥ ಗ್ರಾಮಗಳನ್ನು ಸೆಲೆಕ್ಟ್ ಮಾಡಲು ನಮ್ಮ ಎಂ.ಎಸ್.ಇ.ಬಿ. ಯವರಿಗೆ ಆದೇಶವನ್ನು ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಗ್ರಾಮಗಳನ್ನು ಘಟಕವನ್ನಾಗಿ ಇಟ್ಟುಕೊಳ್ಳುವಂತಹ ಕ್ರಮ ವಿಲ್ಲ. ಒಂದೊಂದು ಗ್ರಾಮಕ್ಕೆ ಪ್ರೊಜೆಕ್ಟ್ ರಿಪೋರ್ಟು ಕಳುಹಿಸುವುದರಲ್ಲಿ ಅರ್ಥವಿಲ್ಲ. ಅದು 65 ಸಾವಿರ, 75 ಸಾವಿರ ಅಥವಾ ಒಂದು ಲಕ್ಷವಾಗಬಹುದು. ಅದರ ಸಲುವಾಗಿ ಕೇಳುವುದಿಲ್ಲ. ಈಗ ಇಂಡೀ ತಾಲ್ಲೂಕು ಯೂನಿಟ್ ಆಗಿ ಇಟ್ಟುಕೊಂಡು ಪ್ರೊಜೆಕ್ಟ್ ರಿಪೋರ್ಟು ತಯಾರುಮಾಡಿ ದ್ದಾರೆ. ಅದೇ ರೀತಿ ಚಿಕ್ಕಬಳ್ಳಾಪುರವನ್ನು ಯೂನಿಟ್ ಆಗಿ ಇಟ್ಟುಕೊಂಡು ಪ್ರೊಜೆಕ್ಟ್ ರಿಪೋರ್ಟು ತಯಾರು ಮಾಡಿದ್ದಾರೆ. ಅದೇ ರೀತಿ ಇನ್ನೂ 5 ಪ್ರೊಜೆಕ್ಟ್ ರಿಪೋರ್ಟು ತಯಾರು ಮಾಡಿ ಕಳುಹಿಸಿಕೊಟ್ಟಿದ್ದಾರೆ. ಕಳುಹಿಸಿದ ತಕ್ಷಣ ಅಲ್ಲಿಂದ ದುಡ್ಡು ಬರುವುದಿಲ್ಲ. ಅವರು ಅದರ ಫೀಸಿಬಿಲಿಟಿ, ಖರ್ಚು, ಆದಾಯ ಮುಂತಾದುವುಗಳನ್ನು ನೋಡಿಕೊಂಡು ಅದನ್ನು ಮಂಜೂರು ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಇಂಡಿ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳನ್ನು ಮಾತ್ರ ಈ ಸ್ಕೀಂಗಳಿಗೆ ಆಳವಡಿಸಿ, ಬೇರೆ ತಾಲ್ಲೂಕುಗಳನ್ನು ಆಳವಡಿಸದಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—7 ಸ್ಕೀಮುಗಳನ್ನು ಒಟ್ಟು ತಯಾರುಮಾಡಿ ಕಳುಹಿಸಿ ಕೊಟ್ಟಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ, ಅದರಿಂದ ಮ್ಯಾಕ್ಸಿಮಂ ಅನುಕೂಲವನ್ನು ಪಡೆಯತಕ್ಕಂತಹ ವಿಚಾರ ಇದೆ. ಇನ್ನೂ ಅನೇಕ ಬೇರೆ ಬೇರೆ ಸ್ಕೀಮುಗಳನ್ನು ತಯಾರು ಮಾಡಬೇಕೆಂದು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಹೇಳಿದ್ದೇವೆ. ಅವರು ಆ ಕೆಲಸವನ್ನು ಮಾಡುತ್ತಿ ದ್ದಾರೆ. ಎಲ್ಲ ಎಲೆಕ್ಟ್ರಿಫಿಕೇಷನ್ ಕಡಿಮೆ ಖರ್ಚಿನಲ್ಲಿ ಆಗುತ್ತದೆ, ಎಲ್ಲ ಫೀಸಿಬಿಲಿಟಿ ಇದೆ, ಅಲ್ಲಗೆ ರಿಪೋರ್ಟು ತಯಾರು ಮಾಡುತ್ತಿದ್ದಾರೆ. ಹೋದ ವರ್ಷ ಈ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿದೆ. ಇದರಿಂದ ಹೆಚ್ಚಿನ ಅನುಕೂಲವನ್ನು ಪಡೆಯಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಎರಡು ಮಂಜೂರಾಗಿವೆ. ಪ್ರತಿ ವರ್ಷ ಹೆಚ್ಚು ಹೆಚ್ಚು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ಕಾರ್ಪೊರೇಷನ್ನಿನಲ್ಲಿ ನಮ್ಮ ಸರ್ಕಾರ ದವರು ಯಾರಾದರೂ ಇದ್ದಾರೆಯೇ ? ಮತ್ತು ನೀವು ಕಳುಹಿಸಿಕೊಟ್ಟಂತಹ ಸ್ಕೀಮುಗಳನು ಅಂಗೀಕಾರ ಮಾಡುವುದಕ್ಕೆ ಪ್ರಾಶಸ್ತ್ಯ ಕೊಡತಕ್ಕ ನೀತಿ ಏನಾದರೂ ಆ ಕಾರ್ಪೊರೇಷನಿನಲ್ಲಿ ಇದೆಯೇ ? ಮತ್ತು ಕಾರ್ಪೊರೇಷನ್‌ನ್ನು ಮಾಡುವಾಗ ರಾಜ್ಯಸರ್ಕಾರದ ಸಲಹೆಗಳನ್ನು ಏನಾದರೂ ಕೇಳಿದ್ದರೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ಯಾವುದೇ ಕಾರ್ಪೊರೇಷನ್ ಮಾಡು ವಾಗ ಪ್ರತೀ ರಾಜ್ಯಕ್ಕೆ ಒಂದೊಂದು ಪ್ರತಿನಿಧಿತ್ವವನ್ನು ಕೊಡುವುದು ಕಷ್ಟವಾಗುತ್ತದೆ. ಹಾಗಾದರೆ ಅದು ಒಂದು ಸಣ್ಣ ಅಸೆಂಬ್ಲಿಯೇ ಆಗುತ್ತದೆ. ಎಲ್ಲಾ ರಾಜ್ಯಗಳವರೂ ನಮಗೆ ಒಂದು ಪ್ರತಿ ನಿಧಿತ್ವ ಬೇಕು ಎಂದು ಹೇಳಬಹುದು. ಪ್ಲಾನಿಂಗ್ ಕಮಿಷನಿನವರು, ನ್ಯಾಷನರ್ ಡೆವಲಪ್ ಮೆಂಟ್ ಕೌನ್ಸಿಲನವರು ರೂರಲ್ ಎಲೆಕ್ಟ್ರಿಫಿಕೇಶನ್ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕಾರ್ಪೊ ರೇಷನನ್ನು ಕೇಂದ್ರಸರ್ಕಾರದವರು ಮಾಡಿದ್ದಾರೆ. ಕಾರ್ಪೊರೇಷನಿನವರ ಮುಂದೆ ಎಲ್ಲಾ ರಾಜ್ಯಗಳ ಎಲೆಕ್ಟ್ರಿಸಿಟಿ ಬೋರ್ಡಿನವರು ತಮ್ಮ ತಮ್ಮ ಯೋಜನೆಗಳನ್ನು ತೆಗೆದುಕೊಂಡು ಹೋಗು ತ್ತಾರೆ. ಉತ್ತಮವಾದ ಯೋಜನೆಗಳನ್ನು ತೆಗೆದುಕೊಂಡು ಹೋಗಿ ಅವರ ಮನವೊಲಿಸಿದರೆ ಯೋಜನೆ ಮಂಜೂರಾಗುತ್ತದೆ.

Sri C. K. RAJAIAH SHETTY.—May I know whether Government of India has assured this Corporation that it would finance and if so to what extent and whether the State Government has also financed this Corporation and if so to what extent ?

Sri VEERENDRA PATIL.—I don't think Sir, we are financing anything to the Rural Electrification Corporation. This is a Corporation constituted by the Planning Commission and approved by the Government of India. Whatever amount Government of India thought it necessary to give, they have given. They have now placed Rs. 150 crores at the disposal of this Corporation and as the demands increase they may think of increasing this amount also.

ಶ್ರೀ ಬಾಪೂಗೌಡ.—ಈಗ 7 ಯೋಜನೆಗಳನ್ನು ಕಳುಹಿಸಿದ್ದೀರಿ. ಆದರೆಲ್ಲ ಎರಡು ಮಂಜೂರಾಗಿದೆ. ಬೇರೆ ರಾಜ್ಯಗಳವರು ಎಷ್ಟು ಯೋಜನೆಗಳನ್ನು ಕಳುಹಿಸಿದ್ದಾರೆ ಮತ್ತು ಅವುಗಳಲ್ಲ ಎಷ್ಟು ಮಂಜೂರಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಬೇರೆ ರಾಜ್ಯಗಳಿಗೆ ಸಂಬಂಧಪಟ್ಟ ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ ನಾವು ಬೇರೆ ರಾಜ್ಯಗಳಿಗಿಂತ ಹಿಂದೆ ಬಿದ್ದಿಲ್ಲವೆಂದು ಹೇಳಬಹುದಷ್ಟೆ.

ಶ್ರೀ ಎನ್. ಎ. ಜನ್ನೇಗೌಡ.—ಇಲ್ಲಿ 242 ಹಳ್ಳಿಗಳನ್ನು ಆರಿಸಿದ್ದೀರಿ. ಆ ಹಳ್ಳಿಗಳ ಪಟ್ಟಿ ಸರ್ಕಾರದವರು ಕೊಟ್ಟದ್ದೇ, ಅಥವಾ ಎಂ.ಎಸ್.ಇ.ಬಿ. ಯವರು ಕೊಟ್ಟರೇ, ಅಥವಾ ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನವರೇ ಆರಿಸಿದರೇ? ಹಾಗೆ ಆರಿಸುವುದಕ್ಕೆ ಆಧಾರಗಳೇನನ್ನು ಇಟ್ಟುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ವಿಲೇಜ್ ಯೂನಿಟ್ ಮಾಡುವುದಕ್ಕೆ ಬರುವುದಿಲ್ಲ. ಒಂದು ಕಂಪ್ಯಾಕ್ಟ್ ಏರಿಯಾ ತೆಗೆದುಕೊಂಡು ಮಾಡಬೇಕಾಗುತ್ತದೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಏನು ಬೇರೆ ಇತರ ಕಾರ್ಯಕ್ರಮಗಳನ್ನು ಮಾಡುತ್ತಾರೆ, ಹಾಗೆ ಇದನ್ನು ಮಾಡುತ್ತಿಲ್ಲ. ಒಂದು ಕಂಪ್ಯಾಕ್ಟ್ ಏರಿಯಾ ತೆಗೆದುಕೊಂಡು, ಅಲ್ಲ ಎಷ್ಟು ಖರ್ಚು ಇದೆ, ಆದಾಯ ಇದೆ, ಸ್ಟೆಪ್ ಡೌನ್ ಸ್ಟೇಶನ್, ಇಂಟರ್ನಲ್ ವೈಯರಿಂಗ್, ಮುಂತಾದುವುಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡದೆ ಮಂಜೂರಾತಿ ಕೊಡುವಹಾಗೆ ಇಲ್ಲ. ಪ್ರೊಜೆಕ್ಟ್ ರಿಪೋರ್ಟು ತಯಾರು ಮಾಡುವಾಗ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ತಯಾರು ಮಾಡುತ್ತಾರೆ.

ಶ್ರೀ ಎ. ಆರ್. ಪಂಚಗಾವಿ.—ಪ್ರೊಜೆಕ್ಟ್ ರಿಪೋರ್ಟು ತಯಾರು ಮಾಡುವಾಗ ರಾಜ್ಯ ಸರ್ಕಾರ ಯಾವ ಭಾಗದಲ್ಲ ಇಲ್ಲಿಯವರೆಗೆ ಅಭಿವೃದ್ಧಿಯಾಗಿಲ್ಲ ಹೆಚ್ಚು ನದಿಯಿಲ್ಲ, ಮತ್ತು ಬರಗಾಲ ಇದೆ, ಆ ಭಾಗಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಸ್ಪಷ್ಟವಾಗಿ ಇದರಲ್ಲಿ ಹೇಳಿದ್ದೇನೆ. ಎಲೆಕ್ಟ್ರಿಫಿಕೇಷನ್ ಹೆಚ್ಚಿನ ರೀತಿಯಲ್ಲಿ ಮಾಡುವಂತೆ ಮಾಡುವುದಿಲ್ಲ. ಕಾರ್ಪೊರೇಷನ್ ಅವರು ಕಮರ್ಷಿಯಲ್ ತರ ಕೆಲಸ ಮಾಡುತ್ತಿದ್ದಾರೆ. ನಮ್ಮಲ್ಲಿ ಬರಗಾಲ ಇದೆ, ನಮ್ಮಲ್ಲಿ ಇಂತಹ ಕೆಲಸ ಮಾಡಿಲ್ಲವೆಂದು ಹೇಳಿದರೆ ಅವರು ಕೊಡುವುದಿಲ್ಲ. ಆದರ ಫೀಸಿಬಿಲಿಟಿ ಮೊದಲು ನೋಡುತ್ತಾರೆ. ಒಂದು ಸ್ಕೀಂ ಮಂಜೂರು ಮಾಡಿದರೆ, ಅದರಿಂದ ಎಷ್ಟು ರಿಟರ್ನ್ ಬರುತ್ತದೆ, ಬರದಿದ್ದರೆ ಏನಾಗುತ್ತದೆ ಎಂಬುದನ್ನೆಲ್ಲಾ ನೋಡಿಕೊಂಡು ಮಾಡುತ್ತಾರೆ. ನಾವು ಮಾಡುವ ನಾರ್ಮಲ್ ಪ್ರೋಗ್ರಾಂ ಬೇರೆ, ಕಾರ್ಪೊರೇಷನ್ ಪ್ರೋಗ್ರಾಂ ಬೇರೆ. ನಾರ್ಮಲ್ ಪ್ರೋಗ್ರಾಂ ಪ್ರಕಾರ ಎಲ್ಲೆಲ್ಲಿ ಹಿಂದುಳಿದ ಪ್ರದೇಶ ಇದೆ, ಅಲ್ಲ ಮಾಡುತ್ತೇವೆ.

ಶ್ರೀ ಐ. ಸೋಮಶೇಖರಪ್ಪ.—ಉಳಿದ 5 ಸ್ಕೀಮುಗಳು ಯಾವ್ಯಾವುವು ?

ಶ್ರೀ ವೀರೇಂದ್ರ ಪಾಟೀಲ್.—ಉಳಿದ 5 ಸ್ಕೀಮುಗಳು ಯಾವುವೆಂದು ನನ್ನ ಮುಂದೆ ಇಲ್ಲ. ಆದರೆ ಕೇಂದ್ರಸರ್ಕಾರದವರು ಹುಕ್ಕೇರಿಯಲ್ಲ ಒಂದು ಪ್ರೋಗ್ರಾಂ ಹಾಕಿಕೊಂಡಿದ್ದಾರೆ.

Sri B. B. SAYANAK.—May I know why there are so many interruptions in power supply in Belgaum City and whether it is a fact that there is slow progress to electrify villages in Belgaum taluk ?

Sri VEERENDRA PATIL.—I do not think there is any slow progress in Belgaum District electrification. I do not know about Belgaum City because Belgaum city supply is being made by a private undertaking. I think we can think about taking over that only after the period is over or if there are any serious lapses, but at the moment so far as Belgaum City electricity supply is concerned the Electricity Board is supplying to the Undertaking in Belgaum and that in turn is distributing it to the different consumers. We are receiving some complaints, no doubt. If only there are serious lapses on the part of the licencee we can think of taking action.